ಪರ್ಸೆಂಟ್ ಜನ ಮಾತ್ರ 69 ರೂಪಾಯಿಗಳನ್ನು ಪಡೆಯುತ್ತಿದ್ದಾರೆ. ಈ ಒಂದು ಸಮಸ್ಯೆ ಎಲ್ಲಾ ವ್ಯವಸ್ಥೆಯಲ್ಲೂ ಆಗುತ್ತಿದೆ. ಈ ಅಧಿವೇಶನದ ಕೊನೆಯಲ್ಲಿ ಇದರ ಬಗ್ಗೆ ಮಾತನಾಡೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ : ಇಲ್ಲಿ ಅಧಿಕಾರಿಗಳು ಯಾವ ರೀತಿ ಗೈಡ್ ಮಾಡುತ್ತಾರೋ ಯಾರಿಗೇ ಉತ್ತರವನ್ನು ಕೊಡುತ್ತಾರೋ ಗೊತ್ತಿಲ್ಲ. ಮಾನ್ಯ ಸಚಿವರು ಆಡಳಿತ ಮಂಜೂರಾತಿ ಸಿಕ್ಕಿದೆ ಎಂದು ಹೇಳಿದರು. ಕಳೆದ ಎರಡು ವರ್ಷದಿಂದ ಹಣ ಹೆಚ್ಚು ಇಟ್ಟಿದ್ದರು, ಈಗ ಒನ್‌ಥರ್ಡ್ ಇಟ್ಟು, ಕೆಲಸ ಶುರು ಮಾಡುತ್ತೇವೆ ಎಂದರೆ ಮುಗಿದು ಹೋಯ್ತು ಕಳೆದ ಮೂರು ವರ್ಷಗಳಿಂದ ಆಡಳಿತದ ಮಂಜೂರಾತಿ ಸಿಕ್ಕಿದೆ. ಕಳೆದ ವರ್ಷ ಲಕ್ಷಗಟ್ಟಲೆ, ಇಟ್ಟು ಈ ವರ್ಷ ಬರೀ 20 ಸಾವಿರ ರೂಪಾಯಿಗಳನ್ನು ಇಡುತ್ತೇವೆ ಎಂದರೆ ಕೆಲಸಾನೇ ಪ್ರಾರಂಭವಾಗುವುದಿಲ್ಲ. ಈಗಾಗಲೇ ಆರು ತಿಂಗಳು ಆಗಿ ಹೋಯ್ತು, ಇನ್ನು ಉಳಿದ ಆರು ತಿಂಗಳಲ್ಲಿ ಆಡಳಿತ ಮಂಜೂರಾತಿ ಪಡೆದು ಕೆಲಸ ಪ್ರಾರಂಭ ಮಾಡುವುದು ಯಾವಾಗ?

ಶ್ರೀ ಹೆಚ್. ಜಿ. ಗೋವಿಂದೇಗೌಡ : ನನಗೂ ಗೊತ್ತಿದೆ, ಮತ್ತು ಎಲ್ಲರಿಗೂ ಗೊತ್ತಿದೆ. ಇದರ ಬಗ್ಗೆ ಅಧಿಕಾರಿಗಳು ಈ ಹಣ ಇಟ್ಟಿರತಕ್ಕಂಥದ್ದು ಬಹಳ ಕಡಿಮೆ ಆಗಿದೆ. ಇನ್ನು ಒನ್‌ಥರ್ಡ್ ಪ್ರೊವೈಡ್ ಮಾಡಬೇಕು ಎಂದು ಹೇಳಿ ಆಡಳಿತಾತ್ಮಕ ಮಂಜೂರಾತಿಗಾಗಿ ಕಳುಹಿಸಿಕೊಟ್ಟಿದ್ದಾರೆ. ನಾನು ಸಹ ಅವರಿಗೆ ಹೇಳಿಬಿಟ್ಟು ಆದಷ್ಟು ಜಾಗ್ರತೆ, ಹಣ ಒದಗಿಸಲಿಕ್ಕೆ ಹೇಳುತ್ತೇನೆ. ಹಣ ಒದಗಿಸುವುದು ಸ್ವಲ್ಪ ಕಷ್ಟ ಆಗಿದೆ.

ಜಗಳೂರು ತಾಲ್ಲೂಕಿನಲ್ಲಿ ಕಾಡು ಪ್ರಾಣಿಗಳ ಹಾವಳಿ

547 - ಶ್ರೀ ಎಂ. ಬಸಪ್ಪ (ಜಗಳೂರು) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಜಗಳೂರು ತಾಲ್ಲೂಕಿನಲ್ಲಿ ಕಾಡುಪ್ರಾಣಿಗಳ ಹಾವಳಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

3) ಪರಿಹಾರಕ್ಕಾಗಿ ಬಂದಿರುವ ಅರ್ಜಿಗಳು ಎಷ್ಟು? (ಈ ಪೈಕಿ ಇತ್ಯರ್ಥಗೊಂಡ ಅರ್ಜಿಗಳೆಷ್ಟು?)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) :

1) ಹೌದು.

2) ಕಾಡುಪ್ರಾಣಿಗಳು ಆದಷ್ಟು ಕಾಡನ್ನು ಬಿಟ್ಟು ಬರದಂತೆ ನೈಸರ್ಗಿಕ ಕಾಡು ಉಳಿಸಿ, ಬೆಳೆಸಿ ಕಾಡು ಪ್ರಾಣಿಗಳಿಗೆ ಬೇಕಾದ ಆಹಾರವನ್ನು ಅಲ್ಲಿಯೇ ದೊರಕುವಂತೆ ಮಾಡಲಾಗುತ್ತದೆ. ಒಂದು ವೇಳೆ ಅಲ್ಲಿಗೂ ಮೀರಿ ಅವು ಊರಿನ ಒಳಗಡೆ ಒಂದು ಮನುಷ್ಯರನ್ನು ಕೊಂದರೆ ಅಥವಾ ಗಾಯಗೊಳಿಸಿದರೆ, ಅಥವಾ ದನಕರುಗಳನ್ನು ಅಥವಾ ಸಾಕುಪ್ರಾಣಿಗಳನ್ನು ಹಿಡಿದು ಸಾಯಿಸಿದರೆ ಸರ್ಕಾರದ ಆದೇಶದಂತೆ

ಪರಿಹಾರದ ಹಣವನ್ನು ಕೊಡಲಾಗುತ್ತದೆ. ಅಲ್ಲದೆ ಕಾಡುಪ್ರಾಣಿಗಳು ಕಾಡನ್ನು ಬಿಟ್ಟು ಜನರು ವಾಸಿಸುವ ಪ್ರದೇಶಕ್ಕೆ ಬಂದರೆ ಅವುಗಳನ್ನು ಪಟಾಕಿಯಿಂದ ಶಬ್ದ ಮಾಡಿ, ಬೆದರಿಸಿ ಕಾಡಿಗೆ ಓಡಿಸಲು ಕ್ರಮ ಕೈಗೊಳ್ಳಲಾಗುವುದು.

3) 1996-97ನೇ ಸಾಲಿನಲ್ಲಿ ಒಟ್ಟು 3 ಅರ್ಜಿಗಳು ಬಂದಿದ್ದು ಎಲ್ಲವೂ ಇತ್ಯರ್ಥ ಆಗಿವೆ.

ಶ್ರೀ ಎಂ. ಬಸಪ್ಪ : ಸನ್ಮಾನ್ಯ ಅಧ್ಯಕ್ಷರೆ, ನಮ್ಮ ತಾಲ್ಲೂಕಿನಲ್ಲಿ ಕಾಡು ಜಾಸ್ತಿ ಇದೆ. ಹಂದಿಗಳು ಕೂಡ ಜಾಸ್ತಿ ಇವೆ. ಕಡಲೆಕಾಯಿ ಮತ್ತು ಮೆಕ್ಕೆಜೋಳ ನಮ್ಮ ಮುಖ್ಯವಾದ ಬೆಳೆ ಈ ಹಂದಿಗಳ ಕಾಟದಿಂದ ಇವತ್ತು ಬಿತ್ತಿದ್ದರೆ ನಾಳೆ ಒಂದು ಕಾಳು ಕೂಡ ಸಿಗುವುದಿಲ್ಲ. ಸುಮಾರು ನೂರಾರು ಹಂದಿಗಳು ಸಾಲು ಸಾಲು ಹಿಡಿದುಕೊಂಡು ಹೋಗಿ ಪ್ರತಿಯೊಂದು ಕಾಳನ್ನು ತಿಂದು, ಅಸಾಧ್ಯವಾದಂತಹ ಅನ್ಯಾಯವನ್ನು ಅನಾಹುತವನ್ನು ಮಾಡುತ್ತಿವೆ. ಆದುದರಿಂದ, ಹಂದಿಗಳ ಕಾಟವನ್ನು ತಪ್ಪಿಸಲಿಕ್ಕೆ ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂದು ಕೇಳುತ್ತಿದ್ದೇವೆ, ಇದಕ್ಕೆ ಉತ್ತರವನ್ನು ಒದಗಿಸಬೇಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಅವುಗಳನ್ನು ಹೊಡೆಯುವ ಹಾಗೆ ಇಲ್ಲ. ಪಟಾಕಿ, ಬೆಂಕಿ ಹಚ್ಚಿಸಿ ಓಡಿಸಬೇಕಾಗುತ್ತದೆ. ಅದನ್ನು ಬಿಟ್ಟು ಬೇರೆ ದಾರಿ ಇಲ್ಲ.

ಶ್ರೀ ಎಂ. ಬಸಪ್ಪ : ಹಂದಿಗಳನ್ನು ಓಡಿಸುವಂತಹ, ಹಂದಿಗಳ ಸಂಖ್ಯೆಯನ್ನು ಕಡಿಮೆ ಮಾಡುವಂತಹ ಒಂದು ವ್ಯವಸ್ಥೆಯನ್ನು ಇವರು ಮಾಡಲಿ. ಹಳ್ಳಿಗರಿಗೆ ಅದನ್ನು ಕೋವಿಯಲ್ಲಿ ಹೊಡೆಯಲಿಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು : ಅದು ಅಲ್ಲಿಗೆ ಮಾತ್ರ ಸೀಮಿತವಾಗಿರತಕ್ಕ ಸಮಸ್ಯೆ. ತಾವು ಆನಂತರ ಶಾಸಕರನ್ನು ಕರೆದು, ನಿಮ್ಮ ಅಧಿಕಾರಿಗಳನ್ನು ಕರೆದು, ಅಲ್ಲಿ ಅವರ ಸಮಸ್ಯೆಗೆ ಪರಿಹಾರ ಸಿಗುವ ಹಾಗೆ ಮಾಡಿ ಅದು ವೈಲ್ಡ್ ಲೈಫ್‌ಗೆ ಬರಲಿಲ್ಲ ಎಂದರೆ ಏನು ಮಾಡಬೇಕು? ಹಳ್ಳಿಗರು ಕೋವಿಯಲ್ಲಿ ಹೊಡೆದು ಕೊಂದರೆ ನಿಮ್ಮ ಲೋಕಲ್ ಆಫೀಸರ್‌ಗಳನ್ನು ಕೇಸಸ್ ರಿಜಿಸ್ಟರ್ ಮಾಡದಂತೆ, ವ್ಯವಸ್ಥೆಯನ್ನು ಮಾಡಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಪಾಂಡವಪುರದಲ್ಲಿ, ಜಾಮರಾಜನಗರದಲ್ಲಿ ಇಂಥ ಘಟನೆ ಆಗಿ ಕೋವಿಯಲ್ಲಿ ಕೊಂದಿದ್ದಾರೆ. ಅವರ ಮೇಲೆ ನಾವು ಯಾವುದೇ ಕ್ರಮವನ್ನು ಕೈಗೊಂಡಿಲ್ಲ.

ಮಾನ್ಯ ಸದಸ್ಯರು : ಬೇಲಿಗಳನ್ನು ಹಾಕಲಿಕ್ಕೆ ಅರಣ್ಯ ಇಲಾಖೆಯಿಂದ ಸಹಾಯಧನವನ್ನು ಹೆಚ್ಚು ಮಾಡಿದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಈ ಎಲ್ಲಾ ಸಮಸ್ಯೆಗಳನ್ನು ನಿವಾರಣೆ ಮಾಡಬಹುದು. ಇದರಿಂದ ಕಾಡಿನ ರಕ್ಷಣೆ ಸಹಿತ ಆಗುತ್ತದೆ, ಪ್ರಾಣಿಗಳು ಬರುವುದಿಲ್ಲ. ಮೆಟೇರಿಯಲ್ಸ್ ಅನ್ನು ಅವರು ಖರೀದಿ ಮಾಡುವುದು ಬೇಡ, ಈಗ ನಾವು ಗೋಬರ್ ಗ್ಯಾಸ್‌ಗೆ ಖರೀದಿ ಮಾಡುವಾಗ ಸಬ್ಸಿಡಿ ಕೊಡುತ್ತಾರಲ್ಲ ಹಾಗೆ ಇದಕ್ಕೂ ಕೊಡಲಿ.

ಅಧ್ಯಕ್ಷರು : ನಿಮಗೆ ಆ ಇಲಾಖೆ ಕಷ್ಟ ಗೊತ್ತಿಲ್ಲ. ಅವರು ಆದ್ದರಿಂದ ನಡೆಸಿಕೊಂಡು ಬರುತ್ತಿದ್ದಾರೆ. ಇಲಾಖೆ ನಡೆಸುತ್ತಿರುವ ಅವರಿಗೆ ಅದರ ಕಷ್ಟ ಗೊತ್ತಿದೆ.

ಶ್ರೀ ಎಸ್. ಎಸ್. ಪಾಟೀಲ್ : ಮೊದಲು ನಮ್ಮ ಕಡೆಗೂ ಈ ಹಂದಿಗಳ ಕಾಟ ಬಹಳ ಇತ್ತು. ಆದರೆ ಕಾಲರ ಬಂದು ಎಲ್ಲಾ ಸತ್ತು ಹೋದವು. ಆಗ ನಮ್ಮ ಕಡೆ ಜನ ಮಾತನಾಡುತ್ತಿದ್ದರು, ಅವು ಕೂಡ ಅಡವಿ ಹಂದಿಗಳೇ ಅವನ್ನು ನಾವೇ ಕಾಯುತ್ತಿದ್ದೆವು ಸರ್ಕಾರ ಬಂದು ಕಾಯಬೇಕು ಎಂದು ಏನು ಇರಲಿಲ್ಲ. ನಮ್ಮ ಜಮೀನುಗಳನ್ನು ನಾವು ಕಾಯುತ್ತಿದ್ದೆವು. ನಾನು ಕೂಡ ಹಂದಿಗಳನ್ನು ಕಾಯಲಿಕ್ಕೆ ಹೋಗುತ್ತಿದ್ದೆ. ಆಗ ನಮ್ಮ ಹಿರಿಯರು ಹೇಳುತ್ತಿದ್ದರು ಹೊಲವನ್ನೆಲ್ಲಾ ಹಂದಿ ಹೆಚ್ಚು ತಿಂದ ಹಾಗೆ ಕಂಡರೂ ಹೆಚ್ಚು ಬೆಳೆ ಬರುತ್ತದೆ ಎಂದು ಹೇಳುತ್ತಿದ್ದರು. ಹಂದಿಗಳು ಕಡಿಮೆ ಆದ ಮೇಲೆ ಬೆಳೆ ಕಡಿಮೆ ಆಯ್ತು ಎಂದು ಹೇಳುತ್ತಿದ್ದರು. ರೈತರು ಇರುವುದೇ ಕಾಡು ಪ್ರಾಣಿಗಳಿಂದ ಕಾಳುಗಳನ್ನು ಕಾಪಾಡುವುದಕ್ಕೆ, ಅವರು ಅದನ್ನು ಕಾಯಬೇಕು.

ಶ್ರೀ ಎಂ. ಬಸಪ್ಪ : ಒಬ್ಬ ಬಡವ ಇರುತ್ತಾನೆ ಅವನು ಎರಡು ಎಕರೆ ಜಮೀನಿನಲ್ಲಿ ಬೆಳೆ ಬೆಳೆದಿರುತ್ತಾನೆ. ಅವನು ರಾತ್ರಿಯೆಲ್ಲಾ ಹೇಗೆ ಕಾಯುವುದಕ್ಕೆ ಆಗುತ್ತದೆ?

ಅಧ್ಯಕ್ಷರು : ಇದು ಸ್ಥಳೀಯವಾದ ಪ್ರಶ್ನೆ, ನಿಮ್ಮ ಸಮಸ್ಯೆಗೆ ಅವರು ಸ್ಪಂದಿಸಿರುತ್ತಾರೆ. ನಾನು ಈಗ ಮುಂದಿನ ಪ್ರಶ್ನೆಗೆ ಹೋಗುತ್ತೇನೆ. ಈಗ ಸದ್ಯಕ್ಕೆ ಹಂದಿಗಳದ್ದು ಎಲ್ಲಾ ಮುಗಿಸಿ ಆಮೇಲೆ ಮುಂದಕ್ಕೆ ಹೋಗೋಣ.

ಹಿರೇಕೆರೂರು ತಾಲ್ಲೂಕು ಕುಡಪಲಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ವೈದ್ಯರು

548 - ಶ್ರೀ ಯು. ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿರೇಕೆರೂರು ತಾಲ್ಲೂಕು ಕುಡಪಲಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರಿಲ್ಲದೆ ಸಾರ್ವಜನಿಕರಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ವೈದ್ಯರನ್ನು ತುಂಬಲು ಕೂಡಲೇ ಕ್ರಮ ತೆಗೆದುಕೊಳ್ಳಲಾಗುವುದೇ?

ಡಾ|| ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬಂದಿದೆ.

ಆ) ಕ್ರಮ ಕೈಗೊಳ್ಳಲಾಗುವುದು.

10.40 ಎ.ಎಂ.

ಶ್ರೀ ಯು. ಬಿ. ಬಣಕಾರ್ : ಮಾನ್ಯ ಅಧ್ಯಕ್ಷರೇ, ಈ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸುಮಾರು ಒಂದೂವರೆ ವರ್ಷಗಳಿಂದ ಅಲ್ಲಿ ವೈದ್ಯರಿಲ್ಲ. ಈಗಲಾದರೂ ಸರ್ಕಾರ ಎಚ್ಚೆತ್ತು, ಇಷ್ಟು ದಿವಸಗಳಲ್ಲಿ ವೈದ್ಯರನ್ನು ಅಲ್ಲಿ ಹಾಕುತ್ತೇವೆ ಎಂದು ಉತ್ತರದಲ್ಲಿ ಭರವಸೆ ಕೊಟ್ಟಿದ್ದರೆ ಸರಿಯಾಗುತ್ತಿತ್ತು. ಒಂದೂವರೆ ವರ್ಷದಿಂದ ಈ ಕುಡಪಲಿ ದವಾಖಾನೆಯಲ್ಲಿ ವೈದ್ಯರಿಲ್ಲ. ತಾಲ್ಲೂಕು ಕೇಂದ್ರವಾದಂಥ ಹಿರೇಕೆರೂರಿನಲ್ಲಿ ಇಬ್ಬರು ವೈದ್ಯರಿಲ್ಲ ಮತ್ತು ಒಬ್ಬರು ಮಹಿಳಾ ವೈದ್ಯರಿಲ್ಲ ಕಳೆದ ವಿಧಾನಸಭಾ